ದಿನಾಂಕ 25-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ವಿ.ಎನ್.ಕೆ ವಕೀಲರಿಂದಃ</u>**

ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾ ಆಸ್ತಿಯು ಮೂಲತಃ ಯಾರ ಮಾಲೀಕತ್ವಕ್ಕೆ ಸೇರಿದ ಆಸ್ತಿ ಎಂದು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸರಕಾರವು ನನ್ನ ಯಜಮಾನರಿಗೆ ಮಂಜೂರು ಮಾಡಿತ್ತು ಎಂದು ನುಡಿಯುತ್ತಾರೆ. ನನಗೆ ಇಬ್ಬರು ಗಂಡು ಮಕ್ಕಳು. ಅವರು ವ್ಯವಸಾಯ ಮಾಡುತ್ತಾರೆ. ನನ್ನ ಗಂಡ ನಾಗೇಂದ್ರಪ್ಪ ಜಿಗಣಿ ರವರಿಗೆ 6 ಜನ ಸಹೋದರರು. ನನಗೆ 7 ಜನ ಸಹೋದರರು ಇದ್ದಾರೆ. ನನ್ನ ತವರು ಮನೆಯ ಕುಟುಂಬದ ಹೆಸರು ಮಣ್ಣಮ್ಮನವರ ಎಂದರೆ ಸರಿ. ನಾನು ಗ್ರಾಮ ಪಂಚಾಯಿತಿ ಸದಸ್ಯೆ ಆಗಿದ್ದೆ ಎಂದರೆ ಸರಿ. ನನ್ನ ಸಹೋದರನಾದ ಮಾರ್ತಾಂಡಪ್ಪ ಮಣ್ಣಮ್ಮನವರು ಸಹ ಗ್ರಾಮ ಪಂಚಾಯಿತಿ ಸದಸ್ಯರು ಇದ್ದರು ಎಂದರೆ ಸರಿ.

2. ಲೋಕಮ್ಮ ಮಣ್ಣಮ್ಮನವರು ನನ್ನ ಚಿಕ್ಕಮ್ಮ. ಅವರು ಸಹ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದರು ಎಂದರೆ ಸರಿ. ಶಿವಶಂಕರ ಮಣ್ಣಮ್ಮನವರು ನನ್ನ ಚಿಕ್ಕಪ್ಪನ ಮಗ. ಅವರು ಸಹ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದರು ಎಂದರೆ ಸಾಕ್ಷಿಯು ಪ್ರಸ್ತುತ ಹಾಲಿ ಸದಸ್ಯರು ಇರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತವರು ಮನೆಗೆ ಸೇರಿದ 2 ಎಕರೆ ಜಮೀನು ಇದೆ ಎಂದರೆ ಗೊತ್ತಿಲ್ಲ. ಸದರಿ 2 ಎಕರೆ ಜಾಗದ ಭಾಗದಲ್ಲಿ ನನಗೆ ಮನೆಯನ್ನು ಕಟ್ಟಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದು, ನಾನು ಮೂಡೂರು ಗ್ರಾಮದಲ್ಲಿ ವಾಸವಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಮನೆಯ ಸಂಖ್ಯೆ 15 ಎಂದರೆ ಗೊತ್ತಿಲ್ಲ. ನಾನು ಸದರಿ ಮನೆಯಲ್ಲಿಯೇ ವಾಸವಾಗಿದ್ದೇನೆ ಎಂದರೆ ಸಾಕ್ಷಿಯು ಸರಕಾರವು ಮಂಜೂರು ಮಾಡಿದ ದಾವಾ ಆಸ್ತಿಯಲ್ಲಿ ಮನೆಯನ್ನು ನಿರ್ಮಿಸಿಕೊಂಡು ವಾಸವಾಗಿದ್ದೇನೆ ಎಂದು ನುಡಿಯುತ್ತಾರೆ.

3. ನನ್ನ ಮದುವೆಯು 50 ವರ್ಷಗಳ ಹಿಂದೆ ಆಗಿದೆ. ದಾವಾ ಆಸ್ತಿಯ ಖುಲ್ಲಾ ಜಾಗವನ್ನು ಸರಕಾರವು 1990 ನೇ ಇಸವಿಯಲ್ಲಿ ನನ್ನ ಗಂಡನಿಗೆ ಮಂಜೂರು ಮಾಡಿತ್ತು. ಶಿವಲಿಂಗಪ್ಪ ರವರು ನನ್ನ ಅಣ್ಣ. ನಾನು ಹಾಜರುಪಡಿಸಿರುವ ದಾಖಲೆಯ ಪ್ರಕಾರ ಸರಕಾರವು ನನ್ನ ಅಣ್ಣ ಶಿವಲಿಂಗಪ್ಪರವರಿಗೂ ಸಹ ನಿವೇಶನವನ್ನು ಮಂಜೂರು ಮಾಡಿತ್ತು ಎಂದರೆ ನನಗೆ ಗೊತ್ತಿಲ್ಲ. ವೀರಪ್ಪ ಮಣ್ಣಮ್ಮನವರ ರವರು ಚಿಕ್ಕಪ್ಪನ ಮಗ. ಆತನಿಗೂ ಸಹ ಸರಕಾರವು ಆಸ್ತಿ ಸಂಃ 35 ರ ನಿವೇಶನವನ್ನು ಮಂಜೂರು ಮಾಡಿತ್ತು ಎಂದರೆ ಸರಿ.



4. ದಾವಾ ಆಸ್ತಿಯು ಮೂಲತಃ ಶ್ರೀಮತಿ ಗುಂಡೂಬಾಯಿ ಇನಾಮತಿ ರವರ ಮಾಲೀಕತ್ವದ ಆಸ್ತಿ ಆಗಿತ್ತು ಎಂದರೆ ಇರಬಹುದು. ಪ್ರತಿವಾದಿ ಮತ್ತು ಇತರ 12 ಜನ ವ್ಯಕ್ತಿಗಳು ಸದರಿ ಗುಂಡೂಬಾಯಿ ರವರ ಆಸ್ತಿಯಲ್ಲಿ ಹಲವಾರು ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಇರಬಹುದು. ಸಾಕ್ಷಿ ಮುಂದುವರೆದು ಆದರೆ ಅಜ್ಜಪ್ಪ ಕಿರವಾಡಿ ರವರು ನನ್ನ ದಾವಾ ಆಸ್ತಿಗೆ ಬಂದು ತೊಂದರೆ ಕೊಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ಹೆಸರಿಗೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯು ಠರಾವನ್ನು ಹೊರಡಿಸಿ ಆತನು ವಾಸವಿರುವ ಮನೆಗೆ ಉತಾರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

5. ಆಸ್ತಿ ಸಂಃ 193/3 ರಲ್ಲಿ ಜಾಗ ಇದೆ ಎಂದರೆ ಇರಬಹುದು. ಸದರಿ ಆಸ್ತಿಗೆ ಸಂಬಂಧಪಟ್ಟ ಉತಾರದಲ್ಲಿ ಖುಲ್ಲಾ ಜಾಗ ಎಂದು ನಮೂದಿಸಲಾಗಿದೆ ಎಂದರೆ ಗೊತ್ತಿಲ್ಲ. ಆಸ್ತಿ ಸಂಃ 190/3 ರ ಗ್ರಾಮ ಠಾಣಾ ಜಾಗದಲ್ಲಿ ಸರಕಾರವು ಸದರಿ 12 ವ್ಯಕ್ತಿಗಳನ್ನು ಹೊರತುಪಡಿಸಿ ಒಟ್ಟು 40 ಜನರಿಗೆ ನಿವೇಶನವನ್ನು ಮಂಜೂರು ಮಾಡಿ ಪಟ್ಟಾ ನೀಡಿರುತ್ತದೆ ಎಂದರೆ ಸರಿ. ಈ ದಾವೆಯ ಪ್ರತಿವಾದಿಯು 1993 ರಲ್ಲಿ ಇತರ 11 ಜನರೊಂದಿಗೆ ಸೇರಿಕೊಂಡು ಅಸಲು ದಾವಾ ಸಂಃ 171/1993 ರ ದಾವೆಯನ್ನು ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಗ್ರಾಮ ಪಂಚಾಯಿತಿ ಅಧಿಕಾರಿಗಳು ರಾಜೀ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟ ಕಾರಣಕ್ಕೆ ಸದರಿ ದಾವೆಯನ್ನು ಪ್ರತಿವಾದಿ ಮತ್ತು ಇನ್ನಿತರರು

ಹಿಂಪಡೆದಿದ್ದರು ಎಂದರೆ ಗೊತ್ತಿಲ್ಲ.

6. ಗ್ರಾಮ ಪಂಚಾಯಿತಿ ಅಧಿಕಾರಿಗಳು 2012 ರಲ್ಲಿ ಪ್ರತಿವಾದಿಗೆ ತೊಂದರೆ ಕೊಟ್ಟ ಕಾರಣಕ್ಕೆ ಆತನು ಮತ್ತೊಂದು ದಾವೆಯನ್ನು ಸಲ್ಲಿಸಿದ್ದನು ಎಂದರೆ ಗೊತ್ತಿಲ್ಲ. ಶಿರಗೋಡ ಗ್ರಾಮಪಂಚಾಯಿತಿ ಅಧಿಕಾರಿಗಳು ಪ್ರತಿವಾದಿಯರು ದಾವಾ ಆಸ್ತಿಯನ್ನು ಅತಿಕ್ರಮಿಸಿದ್ದಾರೆಂದು ಆಧರಿಸಿ ಭೂ ಕಬಳಿಕೆ ನಿಷೇದ ವಿಶೇಷ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಯು ಮನೆಯನ್ನು ಕಟ್ಟಿಕೊಂಡು ವಾಸವಿದ್ದ ಕಾರಣಕ್ಕೆ ಗ್ರಾಮ ಪಂಚಾಯಿತಿ ಅಧಿಕಾರಿಗಳು ಭೂ ಕಬಳಿಕೆ ನ್ಯಾಯಾಲಯದಲ್ಲಿ ಸದರಿ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸಾಕ್ಷಿಯು ದಾವಾ ಆಸ್ತಿಯಲ್ಲಿ ನಾನು ಮನೆಯನ್ನು ಕಟ್ಟಿಕೊಂಡು ವಾಸವಿದ್ದೇನೆಂದು ನುಡಿಯುತ್ತಾರೆ.

-9-

7. ಗ್ರಾಮ ಪಂಚಾಯಿತಿಯವರು ಸಲ್ಲಿಸಿದ್ದ ಭೂ ಕಬಳಿಕೆ ನಿಷೇದ ವಿಶೇಷ ಪ್ರಕರಣವು ವಜಾಗೊಂಡಿರುತ್ತದೆ ಎಂದರೆ ಗೊತ್ತಿಲ್ಲ. 1992 ರಿಂದ ಇದುವರೆಗೂ ಪ್ರತಿವಾದಿ ಮತ್ತು ಶಿರಗೋಡ ಗ್ರಾಮ ಪಂಚಾಯಿತಿ ಅಧಿಕಾರಿಗಳ ನಡುವೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪ್ರಕರಣಗಳು ನಡೆದಿರುತ್ತವೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ನಾನು ಕಬ್ಜಾ ಮತ್ತು ವಹಿವಾಟಿನಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ನಾನೇ ಮನೆಯನ್ನು ಕಟ್ಟಿಕೊಂಡು ದಾವಾ ಆಸ್ತಿಯಲ್ಲಿ ವಾಸವಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಪೂ- ಮುಖ್ಯ ರಸ್ತೆ, ಪ- ಶಿವಪುತ್ರಪ್ಪ ಕಾಳಂಗಿ ರವರ ಪ್ಲಾಟ ಸಂಃ 20 ರ ಆಸ್ತಿ, ಉ- ಉಜ್ಜಪ್ಪ ಮಲ್ಲಪ್ಪ  ಬ್ಯಾತನಾಳ ರವರ ಪ್ಲಾಟ ಸಂಃ 6 ರ ಆಸ್ತಿ, ದ- ಅಜ್ಜಪ್ಪ ಸಿದ್ದಪ್ಪ ಕಿರವಾಡಿ ರವರಿಗೆ ಸೇರಿದ ಪ್ಲಾಟ ಸಂಃ4 ರ ಆಸ್ತಿ ಇವೆ.

8. ನಾನು ಮಧ್ಯಂತರ ಅರ್ಜಿಯನ್ನು ಸಲ್ಲಿಸುವಾಗ ಶಿವಪುತ್ರಪ್ಪ ಕಾಳಂಗಿ ರವರನ್ನು ಸಾಕ್ಷಿದಾರರನ್ನಾಗಿ ವಿಚಾರಣೆ ಮಾಡುತ್ತೇನೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವ್ಯಕ್ತಿಯು ಇದೇ ನ್ಯಾಯಾಲಯದಲ್ಲಿ ಇದೇ ದಾವಾ ಆಸ್ತಿಗೆ ಸಂಬಂಧಿಸಿದಂತೆ ಅಸಲು ದಾವಾ ಸಂಃ 17/2024 ರಂತೆ ದಾವೆಯನ್ನು ಸಲ್ಲಿಸಿದ್ದಾನೆ

ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ದಾವಾ ಆಸ್ತಿಯ ಪೂರ್ವದ ಚಕ್ಕುಬಂದಿಯನ್ನು ಅಜ್ಜಪ್ಪ ತಂದೆ ಮಲ್ಲಪ್ಪ ಕಿರವಾಡಿ ರವರ ಆಸ್ತಿ ಎಂದು ನಮೂದಿಸಿರುತ್ತಾರೆ ಎಂದರೆ ಗೊತ್ತಿಲ್ಲ.

9. ಮನೆಯನ್ನು ಮಂಜೂರು ಮಾಡಿಸಿಕೊಳ್ಳಲು ಗ್ರಾಮ ಪಂಚಾಯಿತಿಗೆ 9 ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕು ಎಂದರೆ ಗೊತ್ತಿಲ್ಲ. ಅವುಗಳೆಂದರೆ ಫಲಾನುಭವಿ ಆಧಾರ ಕಾರ್ಡ, ರೇಷನ್ ಕಾರ್ಡ, ಜಾತಿ ಪ್ರಮಾಣ ಪತ್ರ, ಬ್ಯಾಂಕ್ ಪಾಸ ಪುಸ್ತಕ, ಫೋಟೋ, ಪಂಚಾಯಿತಿಯಲ್ಲಿ ಫಲಾನುಭವಿ ಹೆಸರಿನಲ್ಲಿ ಖಾತೆ, ಆಸ್ತಿಯ ಮೇಲೆ ಕರ ಸಂಪೂರ್ಣವಾಗಿ ಕಟ್ಟಿದ ಬಗ್ಗೆ, ರೂ.50/- ಗಳ ಛಾಪಾ ಕಾಗದದ ದಾಖಲೆಯನ್ನು ನೀಡಬೇಕಾಗುತ್ತದೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಮನೆಯನ್ನು ನಿರ್ಮಿಸಲು ಸರಕಾರದಿಂದ ಮನೆಯು ಮಂಜೂರಾಗಿದ್ದು, ಅದು ಅರ್ದಕ್ಕೆ ನಿಂತಿರುತ್ತದೆ ಎಂದು ಸುಳ್ಳುಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.



10. ನಿ.ಪಿ-1 ರ ಕರ ನಿರ್ಧರಣಾ ಪಟ್ಟಿಯು ನನ್ನ ಗಂಡನ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಮಹಿಳೆಯರ ಹೆಸರಿನಲ್ಲಿ ಆಸ್ತಿಯು ಇದ್ದರೆ ಮಾತ್ರ ಸರಕಾರವು ಮನೆಯನ್ನು ಮಂಜೂರು ಮಾಡುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಹೆಸರಿನಲ್ಲಿ ಆಸ್ತಿಯು ಇದ್ದ ಕಾರಣಕ್ಕೆ ಮನೆಯನ್ನು ಮಂಜೂರು ಮಾಡಲಾಗಿದೆ ಎಂದು ನುಡಿಯುತ್ತಾರೆ. 1993 ರಲ್ಲಿ ಸರಕಾರವು ನಿವೇಶನ ರಹಿತರಿಗೆ ಪ್ಲಾಟಗಳನ್ನು ಮಂಜೂರು ಮಾಡಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿ ಸಂಃ 5 ನ್ನು ಸರಕಾರವು ಮಂಜೂರು ಮಾಡಿದ ಆಧಾರದಲ್ಲಿ ನನ್ನ ಗಂಡ ಮಾಲೀಕ ಹಾಗೂ ಕಬ್ಜಾದಾರನಿದ್ದನು ಎಂದು ವಾದ ಪತ್ರದಲ್ಲಿ ಸುಳ್ಳು ಬರೆಸಲಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಇರುವ ಮನೆಯಿಂದ ನನ್ನನ್ನು ಹೊರದಬ್ಬಲು ಪ್ರಯತ್ನಿಸುತ್ತಿದ್ದಾನೆ ಎಂದು ಸುಳ್ಳು ಬರೆಸಲಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನಗೆ ವಾರಸಾ ಹಕ್ಕು ಬಂದಿದ್ದು, ಅದನ್ನು ರಕ್ಷಣೆ ಮಾಡಿಕೊಳ್ಳಲು ಈ

ದಾವೆಯನ್ನು ಸಲ್ಲಿಸಿದ್ದೇನೆ ಎಂದು ಸುಳ್ಳು ದಾವೆಯನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ